ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ನೀಡಲಾದ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ವಿಷಯ :- ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಗೊಳಿಸುವುದು.

ಪ್ರ. ಸಂ. 475 (1625) ಶ್ರೀ ಎಂ. ವರದೇಗೌಡ (ಚನ್ನಪಟ್ಟಣ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ. ಕಿರಿಯ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಗೊಳಿಸುವ ವಿಚಾರ ಸರಕಾರದ ಗಮನದಲ್ಲಿದೆಯೇ :

ಆ. ಹಾಗಿದ್ದಲ್ಲಿ ಅವರನ್ನು ಯಾವಾಗ ಖಾಯಂಗೊಳಿಸಲಾಗುವುದು?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು) :—

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ವಿಷಯ.—ಬೆಂಗಳೂರಿನಲ್ಲಿರುವ ಪ್ರಥಮ ಮತ್ತು ದ್ವಿತೀಯ ದರ್ಜೆ ಅಧಿಕಾರಿಗಳ ವರ್ಗಾವಣೆ

ಪ್ರ ಸಂಖ್ಯೆ 477 (1166) ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ(ಕೊಪ್ಪಳ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯಲ್ಲಿ (ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಪದವಿಪೂರ್ವ ಶಿಕ್ಷಣ ಮಂಡಲಿಯಲ್ಲಿ ಹಾಗೂ ಬೆಂಗಳೂರು ಜಿಲ್ಲಾ ಉಪ ನಿರ್ದೇಶಕರುಗಳ ಕಛೇರಿಯಲ್ಲಿ ಎಷ್ಟು ಪ್ರಥಮ ಮತ್ತು ದ್ವಿತೀಯ ದರ್ಜೆ ಅಧಿಕಾರಿಗಳಿದ್ದಾರೆ ?

ಆ. ಪ್ರತಿ ಅಧಿಕಾರಿಯೂ ಎಷ್ಟೆಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ.

ಇ. ಬಹಳ ವರ್ಷಗಳಿಂದಲೂ ಬೆಂಗಳೂರಿನಲ್ಲಿಯೇ ಕೆಲಸ ಮಾಡುತ್ತಿರುವವರನ್ನು ಬೆಂಗಳೂರು ಜಿಲ್ಲೆಯಿಂದ ಬೇರೆ ಕಡೆಗೆ ವರ್ಗಾವಣೆ ಮಾಡುತ್ತಿಲ್ಲವೇ ;

ಈ. ಪದವಿಪೂರ್ವ ಶಿಕ್ಷಣ ಮಂಡಳಿಗೆ ಅಧಿಕಾರಿಗಳನ್ನು ಎಷ್ಟು ವರ್ಷ ನಿಯೋಜಿಸಲಾಗುತ್ತಿದೆ. ಹಾಗೂ, ನಿಯೋಜನೆ ಅವಧಿ ಮುಗಿದ ನಂತರ ಅಧಿಕಾರಿಗಳನ್ನು ಅವರ ಇಲಾಖೆಗೆ ಕಳುಹಿಸಲಾಗುತ್ತಿದೆಯೇ ?

ಉ. ಹಾಗಿದ್ದಲ್ಲಿ ಅವಧಿ ಮುಗಿದರೂ ಸಹ ಇನ್ನೂ ಎಷ್ಟು ಜನ ಅಧಿಕಾರಿಗಳು ಅಲ್ಲಿಯೇ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಸರ್ಕಾರದವರು ತಿಳಿಸುವರೇ ?

ಶ್ರೀ ಬಿ. ರಾಚಯ (ಮಾನ್ಯ ವಿದ್ಯಾ ಸಚಿವರು):—

ಅ. ಈ ಕೆಳಕರಡ ಒಂದನೆ ಮತ್ತು ಎರಡನೆ ದರ್ಜೆಯ ಅಧಿಕಾರಿಗಳು ಈ ಇಲಾಖೆಯ ವಿವಿಧ ಕಾರ್ಯಾಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಆಯುಕ್ತರ ಕಾರ್ಯಾಲಯ	
ಒಂದನೆ ದರ್ಜೆ	16
ಎರಡನೆ ದರ್ಜೆ	11
ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ	
ಒಂದನೆ ದರ್ಜೆ	4
ಎರಡನೆ ದರ್ಜೆ	8
ಪದವಿಪೂರ್ವ ಶಿಕ್ಷಣ ಮಂಡಳಿ	
ಹಿರಿಯ ದರ್ಜೆ	5
ಎರಡನೆ ದರ್ಜೆ	6
ನಿರ್ದೇಶಕರು (ಸಂಶೋಧನೆ ಮತ್ತು ತರಬೇತಿ)	
ಒಂದನೆ ದರ್ಜೆ	
ಎರಡನೆ ದರ್ಜೆ	
ಗ್ರಾಮಾಂತರ ಜಿಲ್ಲೆ	
ಒಂದನೆ ದರ್ಜೆ	7
ಎರಡನೆ ದರ್ಜೆ	18

ಅನುಬಂಧದಲ್ಲಿ ವಿವರಗಳನ್ನು ಲಗತ್ತಿಸಲಾಗಿದೆ.
ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ವರ್ಗಾವಣೆಗಳನ್ನು ಮಾಡಲಾಗುತ್ತಿದೆ. ಮಹಿಳಾ ಅಧಿಕಾರಿಯ, ನಿವೃತ್ತಿ ವಯಸ್ಸು ಹತ್ತಿರವಿರುವಂತಹವರು, ಕೆಲವು ಕ್ಷೇತ್ರದಲ್ಲಿ ವಿಶೇಷ ಪರಿಣತಿ ಹೊಂದಿರುವವರನ್ನು ಮತ್ತು ವೈದ್ಯಕೀಯ ಆಧಾರದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ವರ್ಗಾವಣೆಯನ್ನು ಮಾಡಲಾಗುವುದು.

ಸಾಮಾನ್ಯವಾಗಿ ನಿಯೋಜನೆಯನ್ನು ಗರಿಷ್ಠ ಅವಧಿ ಐದು ವರ್ಷಗಳವರೆಗೆ ಮಾಡಲಾಗಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನು ಬಿಟ್ಟು ಉಳಿದ ಎಲ್ಲಾ ಅಧಿಕಾರಿಗಳನ್ನು ಈಗಾಗಲೇ ಅವರ ಇಲಾಖೆಗೆ ಹಿಂದಕ್ಕೆ ಕಳುಹಿಸಲಾಗಿದೆ.

ಪದವಿಪೂರ್ವ ಶಿಕ್ಷಣ ಮಂಡಳಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳನ್ನುಳಿದು ಬೇರೆಯ ಅಧಿಕಾರಿಯು ಕೆಲಸ ಮಾಡುತ್ತಿಲ್ಲ.

ಸಾರ್ವಜನಿಕ ಇಲಾಖೆ ಅಧಿಕಾರಿಗಳ ಪಟ್ಟಿ

ಶ್ರೀಮತಿ/ಶ್ರೀಯುತಗಳು	1979
ಎಲ್. ಶಾರದಮ್ಮ	1978
ರಾಮಕೃಷ್ಣ ರಾವ್	ವಿಶೇಷ ಹುದ್ದೆ
ಚೆನ್ನವೀರ ಸ್ವಾಮಿ	1981
ಸೂರ್ಯನಾರಾಯಣ ನವಡ	ವಿಶೇಷ ಹುದ್ದೆ
ಡಿ. ಆರ್. ಸರೋಜ	1982
ಕೆ. ರಾಮಯ್ಯ	1981
ಟಿ. ಎಂ. ಕುಮಾರ್	1982
ಪಂಕಜ	
ಗಾಯತ್ರಿದೇವೀದತ್	
ಎಂ. ನಟರಾಜ್	1981
ಎಸ್. ಎಂ. ಆನಂದರಾವ್	ವಿಶೇಷ ಹುದ್ದೆ
ಚಾರಎದತ್	
ನಾಗರಾಜ್	ಒ. ಒ. ಡಿ.
ಸಿ. ಸಿದ್ದಯ್ಯ	
ಶ್ರೀಧರ ಶೆಟ್ಟಿ	1982
ಚಂದ್ರಬಾಯಿ	1976
ಟಿ. ಎಸ್. ಭಾಗ್ಯಲಕ್ಷ್ಮಿ	1976
ಎಂ. ಶಾಂತಿಮತಿ	1980
ಎಸ್. ವೈ. ಶೆಲ್ವಪಿಳ್ಳೆ ಐಂಗಾರ	1982
ಎಚ್. ಎನ್. ರಾಮಸ್ವಾಮಿ	ಜನವರಿ 1984
ಟಿ. ಪಿ. ಶಾಂತ ಬಾಯಿ	1981
ಎ. ಎಸ್. ರವೀಂದ್ರನಾಥ	ಫೆಬ್ರುವರಿ 1984
ಎಂ. ಜಲಜಬಾಯಿ	1978
ಎನ್. ರಾಮಯ್ಯ	1982
ಬಿ.ಸಿ. ವಿಮಲ	1984
ಓ. ಕೆ. ಚಾನಕಿ	1980
ಹೆಚ್. ಪ್ರೇಮಾದೇವಿ	1972
ಎ. ಚಂದ್ರಶೇಖರ್ ನಾಯಕ್	1974
ಟಿ. ಸಿ. ರಾಜಾರಾವ್	1982
ಬಿ.ಜಿ. ವಾಟ್‌ಪೆ	1980
ಬಿ. ವಿನಾಕ್ಷಿ	1974
ಜೆ. ಭಾಸ್ಕರಯ್ಯ	1983
ಟಿ.ಸಿ. ರಾಜರಾವ್	1984
ಎಸ್. ಆರ್. ವಿನ್‌ಸೆಂಟ್	1978

ಎಂ. ಬಿ. ಜಗನ್ನಾಥ	1979
ಎನ್. ಶೇಷಮ್ಮ	1974
ಆರ್. ಶರಣಪ್ಪ	1976
ಟಿ. ಸುಶೀಲ	1983
ಟಿ. ಆರ್. ಸರೋಜ	1976
ಬಿ. ಆರ್. ರಾಮಚಂದ್ರ	1979

ವಿಷಯ:—ತುರುವೇಕೆರೆ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ಆಳವಡಿಸುವುದು

ಪ್ರ. ಸಂಖ್ಯೆ 479 (1235) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ) —ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ. ತುರುವೇಕೆರೆ ತಾಲ್ಲೂಕು ಸುಮಾರು ಒಂದುನೂರು ಹದಿನೈದು ಹಳ್ಳಿಗಳಲ್ಲಿ ಜನರಿಗೆ ಕುಡಿಯುವ ನೀರಿಗೆ ತೊಂದರೆ ಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ. ಹಾಗಿದ್ದಲ್ಲಿ ಸದರಿ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ಕೊಳವೆ ಬಾವಿಗಳನ್ನು ಆಳವಡಿಸಲು ಸರ್ಕಾರದವರು ಬೇಗ ಕ್ರಮ ಕೈಗೊಳ್ಳುವರೇ ;

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ನ ಸಚಿವರು).—

ಅ. ಹೌದು.

ಆ. ಇಂತಹ ಗ್ರಾಮಗಳಿಗೆ ಅಭಾವ ಪೀಡಿತ ಪರಿಹಾರ ಕಾರ್ಯಕ್ರಮದಲ್ಲಿ ಕೊಳವೆ ಬಾವಿಗಳನ್ನು ಕೊರೆದು ಕೈ ಪಂಪುಗಳನ್ನು ಆಳವಡಿಸುವ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ :- ರಾಜ್ಯದಲ್ಲಿ ಖಾ ಸಗಿ ಸಂಸ್ಥೆಗಳು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ನಿಗದಿ ಪಡಿಸಿರುವ ಠೇವಣಿ

ಪ್ರ. 480 (1235) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ. ರಾಜ್ಯದಲ್ಲಿ ಖಾಸಗಿ ಸಂಸ್ಥೆಗಳು ಪ್ರೌಢಶಾಲೆಯನ್ನು ಪ್ರಾರಂಭಿಸಲು ಅನುಮತಿ ಕೊಡುವಾಗ ನಿಗದಿ ಪಡಿಸುವ ಠೇವಣಿ ಮೊಬಲುಗು ಎಷ್ಟು ಹಾಗೂ ಸದರಿ ಹಣವನ್ನು ಎಷ್ಟು ವರ್ಷಗಳಲ್ಲಿ ತುಂಬಬೇಕಾಗಿದೆ ;

ಆ. ಯಾವ ಉದ್ದೇಶಕ್ಕಾಗಿ ಖಾಸಗಿ ಸಂಸ್ಥೆಗಳು ಠೇವಣಿ ಮಾಡಲು ಆದೇಶ ನೀಡಲಾಗಿದೆ ;

ಇ. ಸರ್ಕಾರ ನಿಗದಿ ಪಡಿಸಿರುವ ಮೊತ್ತ ಹೆಚ್ಚು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಈ. ಹಾಗಿದ್ದಲ್ಲಿ ಖಾಸಗಿ ಸಂಸ್ಥೆಗಳು ಪ್ರೌಢಶಾಲೆಗಳನ್ನು ನಡೆಸುವುದಕ್ಕೆ ಠೇವಣಿ ಹಣವನ್ನು ಕಡಿಮೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ. ವಿದ್ಯಾಸಂಸ್ಥೆಗಳು 50,000–ರೂ.ಗಳನ್ನು ಸ್ಥಿರ ನಿಧಿಯಾಗಿ ಕಟ್ಟಬೇಕಾಗಿರುತ್ತದೆ. ಈ ಹಣವನ್ನು ಸಂಸ್ಥೆಯು ಇಷ್ಟಪಟ್ಟಲ್ಲಿ 5 ಸಮಾನ ಕಂತುಗಳಲ್ಲಿ 5 ವರ್ಷ ತುಂಬಬಹುದಾಗಿದೆ.

ಆ. ಶಾಲಾ ಆಡಳಿತ ಮಂಡಲಿಯ ಆರ್ಥಿಕ ಸುಭದ್ರತೆಗಾಗಿ.

ಇ. ಇಲ್ಲ.

ಈ. ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ರಾಮನಗರದಲ್ಲಿ ಪಶುವೈದ್ಯಶಾಲೆ

ಪ್ರ. 481 (1495) ಶ್ರೀ ಕೆ. ಜಿ. ಶ್ರೀನಿವಾಸಮೂರ್ತಿ (ಸಾತನೂರು).—ಮಾನ್ಯ ಪಶುಸಂಗೋಪನಾ ಹಾಗೂ ಪಶುವೈದ್ಯ ಸೇವೆಗಳು ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—